ಈ) ಬನ್ನಾರಿ ಸಕ್ಕರೆ ಕಾರ್ಖಾನೆಯವರು ಸಕ್ಕರೆ ಸೆಸ್ ಹಣವನ್ನು ರಾಜ್ಯದ ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ ನಿರ್ದೇಶಕರು ಲೆಕ್ಕ ಮಾಡಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ಕೋರಿಕೆಯನ್ನು ಆದ್ಯತೆಯ ಮೇಲೆ ಪರಿಗಣಿಸಿ ಅವಶ್ಯಕತೆ ಆಧರಿಸಿ ರಸ್ತೆ ಅಭಿವೃದ್ಧಿಗೆ ಹಣವನ್ನು ಬಿಡುಗಡೆ ಮಾಡುತ್ತಿರುತ್ತಾರೆ.

ನಾಗಮಂಗಲದಲ್ಲಿ ಕ್ರೀಡಾಂಗಣ ನಿರ್ಮಾಣ

616 (706) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಾಗಮಂಗಲ ಪಟ್ಟಣದಲ್ಲಿ ಅಮ್ಮನಕೆರೆ ಪ್ರದೇಶದಲ್ಲಿ ಜಾಗವಿದ್ದು, ಹೊರಾಂಗಣ ಕ್ರೀಡಾಂಗಣ ಅವಶ್ಯವಿರುವುದರಿಂದ, ಇಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಯೋಚಿಸಿದೆಯೇ?

ಆ) ನಾಗಮಂಗಲ ತಾಲ್ಲೂಕು ಅಳಿಸಂದ್ರ ಗ್ರಾಮದ ಯುವಕ ಸಂಘವು ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಯಲ್ಲಿ ನೋಂದಣಿಯನ್ನು ನವೀಕರಣ ಮಾಡುತ್ತಾ ಬಂದಿದೆಯೇ? ಲೆಕ್ಕಪತ್ರ ಸರಿಯಾಗಿ ನಡೆಸಲಾಗುತ್ತಿದೆಯೇ?

ಹಾಗೂ ಯುವಕ ಸಂಘಕ್ಕೆ ಇತ್ತೀಚೆಗೆ ಆಹಾರ ಸರಬರಾಜು ಮಾಡಲು ಅನುಮತಿ ನೀಡಲಾಗಿದೆಯೇ?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲ.

ಆ) ನೋಂದಾಯಿಸಲಾಗಿದೆ.

ನವೀಕರಣ ಮಾಡುತ್ತಾ ಬಂದಿದೆ.

ಹೌದು.

ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ನಾಗಮಂಗಲ ತಾಲ್ಲೂಕು ದೇವಾಲಯಗಳಿಗೆ ಹಣ ಬಿಡುಗಡೆ

617 (1028) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಾಗಮಂಗಲ ತಾಲ್ಲೂಕಿಗೆ ಕಳೆದ 3 ವರ್ಷಗಳಲ್ಲಿ ಎಷ್ಟು ದೇವಸ್ಥಾನಗಳಿಗೆ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿ ಕೆಲಸಕ್ಕೆ ಹಣ ಬಿಡುಗಡೆ ಮಾಡಲಾಗಿದೆ; (ವರ್ಷವಾರು ವಿವರ ಒದಗಿಸುವುದು);

ಆ) ಈ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರತಕ್ಕಂತಹ ಕೆಲವು ಪುರಾತನ ದೇವಾಲಯಗಳಿಗೆ ಹಣ ಬಿಡುಗಡೆ ಮಾಡುವಂತೆ ಸರ್ಕಾರದ ಮುಂದೆ ಸಾಕಷ್ಟು ಭಾರಿ ಮನವಿ ಮಾಡಿಕೊಂಡರೂ ಬಿಡುಗಡೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ಕಳೆದ 3 ವರ್ಷಗಳಲ್ಲಿ ನಾಗಮಂಗಲ ತಾಲ್ಲೂಕಿನ 15 ದೇವಸ್ಥಾನಗಳಿಗೆ ಜೀರ್ಣೋದ್ಧಾರ ಮತ್ತು ಅಭಿವೃದ್ಧಿ ಕಾರ್ಯಕ್ಕೆ ಹಣ ಬಿಡಿಗಡೆ ಮಾಡಲಾಗಿದೆ. (ವರ್ಷವಾರು ವಿವರ ಲಗತ್ತಿಸಿದೆ)